# IN THE COURT OF THE ADDL. SENIOR CIVIL JUDGE & JMFC., GUBBI
# OS – **26/2023**

Witness present and duly sworn on : 21.09.2024

Further cross Examination: by Counsel for Plaintiff :

ತುಮಕೂರಿನ ಎ.ಸಿ ನ್ಯಾಯಾಲಯದಲ್ಲಿ ಈ ದಾವೆಯನ್ನು ವಾದಿ ಮತ್ತು ಪ್ರತಿವಾದಿಗಳ ವಿರುದ್ದ ನಾನು ಮೇಲ್ಮನವಿ ಸಲ್ಲಿಸಿದ್ದೇನು ಎಂದರೆ ಸರಿ. ಸದರಿ ಪ್ರಕರಣದ ಸಂಖ್ಯೆ RRT (G)90/2013-2014 ಎಂದರೆ ಸರಿ. ಸದರಿ ಪ್ರಕರಣವನ್ನು ನಾನು ಮತ್ತು ಪ್ರತಿವಾದಿಗಳು ರಾಜಿ ಪತ್ರ ಸಲ್ಲಿಸಿ ರಾಜಿ ಮಾಡಿಕೊಂಡಿದ್ದೇವೆ ಎಂದರೆ ಸರಿ. ಸದರಿ ರಾಜಿ ಮಾಡಿಕೊಂಡಿರುವ ದಿನಾಂಕಃ 24.11.2014 ಎಂದರೆ ಸರಿ. ಸದರಿ ರಾಜಿ ಪತ್ರದ ಪ್ರಕಾರ ದಿನಾಂಕಃ 08.09.2014 ರಾಜಿ ಪತ್ರದಂತೆ ಖಾತೆ ಪಹಣಿ ಮಾಡಿಸಿಕೊಳ್ಳಬಹುದು ಎಂದು ಬರೆದಿರುತ್ತೇವೆ ಎಂದರೆ ಸರಿ. ನಾನು ಈ ದಾವೆಯ ವಾದಿ ಮತ್ತು 4, 6 ನೇ ಪ್ರತಿವಾದಿಗಳು 2014 ರಿಂದ ಬೇರೆ ಬೇರೆ ವಾಸ ಇದ್ದೇವೆ.

ದಾವಾ ಆಸ್ತಿಯು ಭೂ ಪರಿವರ್ತನೆ ಆಗುವ ಮುಂಚೆ ಸರ್ವೆ ನಂ.55/4 ಆಸ್ತಿಗೆ ಸಂಭಂದಿಸಿರುವುದಿಲ್ಲ ಮತ್ತು ಸರ್ವೆ ನಂ.55/1 ಆಸ್ತಿಗೆ ಸಂಭಂದಿಸಿದೆ ಎಂದು ತೋರಿಸಲು ನ್ಯಾಯಾಲಯದಲ್ಲಿ ದಾಖಲೆಯನ್ನು ಹಾಜರುಪಡಿಸಿದ್ದೇನೆ. ಸಾಕ್ಷಿ ಮುಂದುವರೆದು ಸದರಿ ನಮೂದು ಪಾರಿಕತ್ತ ನಲ್ಲಿ ಇದೆ. ನನ್ನ ತಂದೆ ತೀರಿಕೊಂಡು ಸುಮಾರು 5-6 ವರ್ಷಗಳಾಗಿವೆ. ನನ್ನ ತಂದೆ ದಿನಾಂಕಃ 22.08.2013 ರಂದು ಮರಣ ಹೊಂದಿದ್ದಾರೆ ಎಂದರೆ ಸರಿ. ಅವರ ಜೀವಿತ ಕಾಲದಲ್ಲಿ ನಾವು ಮತ್ತು ಪ್ರತಿವಾದಿಗಳು ಸೇರಿ ದಿನಾಂಕಃ 15.06.1995 ರಂದು

ನೊಂದಣಿಯಾಗದೆ ಇರುವ ಪಾರಿಕತ್ತ ಮಾಡಿಕೊಂಡಿದ್ದೇವೆ ಎಂದರೆ ಸರಿ. ಸದರಿ ದಾಖಲೆಯಲ್ಲಿ ವಾದಿಗೆ ದಾವಾ ಆಸ್ತಿಯನ್ನು ನಮ್ಮ ತಂದೆಯ ಕಾಲದಲ್ಲಿ ಕೊಟ್ಟಿದ್ದೇವು ಎಂದರೆ ಸರಿ. ಆದರೆ ಅದು ತಪ್ಪು ಇದೆ. ನಾನು ನನ್ನ ಹೆಸರಿಗೆ ಪಟ್ಟಣ ಪಂಚಾಯ್ತಿಯಲ್ಲಿ ಖಾತೆ ಪಹಣಿ ಮಾಡಿಸಿಕೊಂಡು ನನ್ನ ತಮ್ಮ ವಾದಿಗೆ ತೊಂದರೆ ಕೊಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.

**Re examination - Nil**

(Typed to my dictation in open court)

R.O.I & A.C.

Addl. Senior Civil Judge and
JMFC., Gubbi